

# ಶ್ರೀರಾಮಕೃಷ್ಣರ ದೃಷ್ಟಾಂತ ಚಿತ್ರ

ಒಬ್ಬನು ಒಂದು ಮಡಕೆಯಲ್ಲಿ ನೀರು ತುಂಬಿಸಿ ಇಡುತ್ತಾನೆ.



ಸ್ವಲ್ಪ ಹೊತ್ತಿನ ನಂತರ ಬಂದು ನೋಡುತ್ತಾನೆ. ಆ ಮಡಕೆ ಇಟ್ಟ ಜಾಗವೆಲ್ಲ ನೀರಿನಿಂದ ಒದ್ದೆಯಾಗಿರುತ್ತದೆ. ಮಡಕೆಯಲ್ಲಿ ನೀರೇ ಇಲ್ಲ.



ಅವನು ಆ ಮಡಕೆಗೆ ಇನ್ನೂ ಸ್ವಲ್ಪ ನೀರು ಸುರಿಯುತ್ತಾನೆ.



ಕಲೆ : ಸೋಮಶೇಖರ

ಅನಂತರ ಅದನ್ನು ಎತ್ತಿ ನೋಡುತ್ತಾನೆ. ಒಂದು ರಂಧ್ರದ ಮೂಲಕ ನೀರು ತೊಟ್ಟಿಕ್ಕುತ್ತಿರುತ್ತದೆ.



ಹಾಗೆಯೇ ನಾವು ಸಾಧನೆಯಿಂದ ಪಡೆದ ಶಕ್ತಿಯೆಲ್ಲ ಪ್ರಾಪಂಚಿಕತೆಯ ರಂಧ್ರದ ಮೂಲಕ ಸೋರಿಹೋಗುತ್ತದೆ. ಮೊದಲು ಆ ರಂಧ್ರವನ್ನು ಮುಚ್ಚಬೇಕು.